## INTERNATIONAL INDIAN SCHOOL – DAMMAM

## ANNUAL EXAM (2017-2018)

CLASS : VI | TOTAL MARKS: 80
SUB : KANNADA | DURATION : 3 HRS.

**GENERAL INSTRUCTIONS :**
1) Read all Questions carefully before answering.
2) All Questions must be numbered correctly as in the question paper.

**I** ವಿಭಾಗ – ಎ

ಅ) ಆವರಣದಿಂದ ಸರಿಯಾದ ಪದವನ್ನು ಆರಿಸಿ ಬಿಟ್ಟ ಸ್ಥಳ ತುಂಬಿರಿ : (1 X 10 =10)

೧. ಮೈಸೂರು ಕರ್ನಾಟಕದ ರಾಜ್ಯದ ಬಲು ಸುಂದರವಾದ ________ (ನಗರ, ಪಟ್ಟಣ, ಗ್ರಾಮ)
೨. ಗಾಂಧೀಜಿಯವರಿಗೆ ______ ಅಹಿಂಸೆಯ ತತ್ವ ತುಂಬಾ ಪ್ರಿಯವಾಗಿತ್ತು. (ಸತ್ಯ, ಮಿಥ್ಯ, ನಿತ್ಯ )
೩. _______ ತುಂಬಿರಬೇಕು ನಮ್ಮ ನಡೆ-ನುಡಿಯಲ್ಲಿ. (ಸುಸ್ತು, ಶಿಸ್ತು, ಗಸ್ತು)
೪. _________ನಲ್ಲಿ ಅಂದವಾದ ಅರಮನೆ ಇದೆ. ( ಮೈಸೂರು, ಮಾಲುರು, ಮದ್ದೂರು)
೫. ಅವರು ಎರಡು ನಿಮಿಷ ತಡವಾಗಿ ______ದ ಮನೆಗೆ ಬಂದರು. (ಊಟ, ತೋಟ, ಪಾಠ)
೬. ನವಿಲು ______ ಬಣ್ಣದ ಸುಂದರ ಪಕ್ಷಿ. (ನೀಲಿ, ಹಳದಿ, ಕೆಂಪು)
೭. ದುಡುಕು ________ನ ಗುಣವು ಕೇಳು ಜಾಣ. (ದಡ್ಡ, ಹೆಡ್ಡ, ಗಿಡ್ಡ)
೮. ಅದು ನೋಡಲು ನನ್ನಷ್ಟು ______ವಾಗಿಯೂ ಇಲ್ಲ, (ಅಂದ, ಚಂದ, ಮುದ)
೯. ಮಕ್ಕಳು ______ವೂ ಆಡಬೇಕು. (ಪ್ರತಿತಿಂಗಳು, ಪ್ರತಿವಾರ, ಪ್ರತಿದಿನ)
೧೦. _________ ದ ಪ್ರಪಂಚವು ಬಹಳ ವಿಶಾಲವಾದುದು. (ಆಟ, ಊಟ. ಓಟ).

ಆ) ಈ ಕೆಳಗಿನ ಯಾವುದಾದರೂ ಹತ್ತು ಪದಗಳ ಅರ್ಥ ಬರೆಯಿರಿ : ( Any 10 ) (½ X 10 = 5)

೧. ಕುತೂಹಲ ೨. ಪರರು ೩. ಮುದ ೪. ಉನ್ನತ ೫. ಮುದ್ರೆ ೬. ಸಾರ
೭. ಮನ್ನಣೆ ೮. ಉಪಯುಕ್ತ ೯. ರಸ ೧೦. ತನುಜ ೧೧. ಸಂತೆ ೧೨. ಮಯೂರ :

ಇ) ಈ ಕೆಳಗಿನ ಯಾವುದಾದರೂ ಐದು ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.( Any 5 ) (1 X 5= 5)

೧. ಪ್ರಪಂಚ ೨. ಶುದ್ಧ ೩. ಶಿಕ್ಷಕರು ೪. ಸಂತ
೫. ಜಿಪುಣ ೬. ತನುಜ ೭. ಬಳಕೆ

ಈ) ಈ ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ : (½ X 10 = 5)

೧. ಬೇಡ ೨. ಸಾಧ್ಯ ೩. ಶುದ್ಧ ೪. ಹಳ್ಳಿ ೫. ಹಿಗ್ಗು
೬. ತೃಪ್ತಿ ೭. ಮೇಲೆ ೮. ಶಿಸ್ತು ೯. ಬಹಳ ೧೦. ಸಮಾನ

ಉ) ಈ ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ. : (1 X 5= 5)

೧. ಪ್ರಯತ್ನ ೨. [illegible] ೩. ಬೃಂದಾವನ ೪. ಸಹನೆ ೫. ತಪಸ್ಸು

II

## ವಿಭಾಗ – ಬಿ

**ಅ) ಇವುಗಳನ್ನು ಹೊಂದಿಸಿ ಬರೆಯಿರಿ :** (½ X 10 = 5)

| | |
|---|---|
| ೧. ಮೈಸೂರು | ಆಶ್ರಮ |
| ೨. ಸಾಬರಮತಿ | ಸುಂದರ ನಗರ |
| ೩. ಚಾಮರಾಜೇಂದ್ರ | ಗಾಂಧಿ |
| ೪. ಮಹಾತ್ಮ | ಮೃಗಾಲಯ |
| ೫. ಸುಂದರ | ಅಣ್ಣಯ್ಯ |
| ೬. ದಮ್ಮಯ್ಯ | ಪಕ್ಷಿ |
| ೭. ರೂಪ | ಶುದ್ಧಗಾಳಿ |
| ೮. ಭೂಮಿಗೆ | ಲಾವಣ್ಯ |
| ೯. ಕೋಗಿಲೆ | ಅಹಿಂಸೆ |
| ೧೦. ಸತ್ಯ | ಕಂಠ |

**ಆ) ಈ ಕೆಳಗಿನ ಸ್ಥಳಗಳನ್ನು ಹೆಸರಿಸಿ :** (1 X 3= 3)

೧. ತರಕಾರಿಗಳನ್ನು ಮಾರುವ ಸ್ಥಳ

೨. ಧಾನ್ಯಗಳನ್ನು ಸಂಗ್ರಹಿಸುವ ಸ್ಥಳ

೩. ಅಡಿಗೆ ಮಾಡುವ ಸ್ಥಳ

**ಇ) ಈ ಕೆಳಗಿನ ಪದಗಳನ್ನು ಮಾದರಿಯಂತೆ ಬರೆಯಿರಿ :** (1 X 3= 3)

[ಮಾದರಿ : ನೀಡುವೆ – ನೀಡುತ್ತೇನೆ ]

೧. ಬೇಡುವೆ ೨. ತಡೆವೆ ೩. ಕಡಿಯುವೆ

**ಈ) ಈ ಪದಗಳನ್ನು ಸರಿಯಾಗಿ ಕೂಡಿಸಿ ಅರ್ಥ ಬರುವಂತೆ ವಾಕ್ಯ ಮಾಡಿ :-** (1 X 3= 3)

೧. ಬೆಳೆಸಿಕೊಳ್ಳಿ ಸಂಯಮದ ಶಿಸ್ತು ಗುಣವನ್ನು

೨. ಕೊಳ್ಳಿ ನಡೆದು ಅಹಿಂಸೆಯಿಂದಲೇ

೩. ನವಿಲು ಬಣ್ಣದ ಸುಂದರ ನೀಲಿ ಪಕ್ಷಿ

**ಉ) ಈ ಮಾತನ್ನು ಯಾರು – ಯಾರಿಗೆ ಹೇಳಿದರು :-** (1 X 2= 2)

೧) " ಪಾಲಿಗೆ ಬಂದದ್ದು ಪಂಚಾಮೃತ ಎಂದು ಕೊಂಡು ನೆಮ್ಮದಿಯಿಂದ ಬದುಕು."

೨) " ಬಾಪೂಜಿ ಇದೇನು ಸ್ವಾಮಿ, ನೀವೂ ಹೊರಗಡೆ ನಿಂತಿರುವಿರಲ್ಲ?"

**ಊ) ಈ ಕೆಳಗಿನ ವಾಕ್ಯಗಳಲ್ಲಿನ ವಿಶೇಷಣ ಪದವನ್ನು ಗುರುತಿಸಿ ಬರೆಯಿರಿ :** (1 X 5= 5)

೧. ಹಸು ಸಾಧು ಪ್ರಾಣಿ.
೨. ಬಿಸಿ ಬಿಸಿ ದೋಸೆ ತಿನ್ನಲು ಚೆನ್ನ.
೩. ನವಿಲು ಸುಂದರ ಪಕ್ಷಿ .
೪. ಶಾಲೆಯ ನೂರಾರು ಮಕ್ಕಳು ಪ್ರವಾಸಕ್ಕೆ ಹೋಗಿದ್ದರು.
೫. ಗಾಂಧೀಜಿ ಆಹಾರದ ವಿಚಾರದಲ್ಲಿ ತುಂಬಾ ಸರಳವಾಗಿದ್ದರು.

ಎ ) ಬಿಟ್ಟ ಸ್ಥಳ ತುಂಬಿರಿ :- (1 X 4= 4)

೧. ಕರ್ನಾಟಕದ ಆಡಳಿತ ಭಾಷೆ ________

೨. ________ ಆಶ್ರಮದಲ್ಲಿ ಎಲ್ಲಾ ಮತ-ಧರ್ಮದವರೂ ಇದ್ದರು.

೩. ನಿಯಮ ಮೀರಿ ನಡೆದವರು ________ ಯನ್ನು ಅನುಭವಿಸಬೇಕಾಗಿತ್ತು.

೪. ಗಾಂಧೀಜಿ ದಿನವಿಡೀ ದುಡಿಯುವ ________ ಆಗಿದ್ದರು.

## III ವಿಭಾಗ – ಸಿ

ಅ) ಈ ಕೆಳಗಿನ ಸಂಖ್ಯೆಗಳಿಗೆ ಕನ್ನಡ ಸಂಖ್ಯೆ ಮತ್ತು ಸಂಖ್ಯಾನಾಮಗಳನ್ನು ಬರೆಯಿರಿ. (1 X 4= 4)

೧) 9 ________ , ______________

೨) 40 ________ , ______________

೩) 37 ________ , ______________

೪) 58 ________ , ______________

ಆ). ಈ ಕೆಳಗಿನ ಯಾವುದಾದರೂ ಹತ್ತು ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ : (Any 10 ) (1 X 10 =10)

೧. ಮಕ್ಕಳಿಗೆ ಆಟಗಳು ಎಷ್ಟು ಮುಖ್ಯ?
೨. ಗಾಂಧಿಯವರನ್ನು ಮಹಾತ್ಮ ಎಂದು ಮೊದಲು ಕರೆದವರು ಯಾರು?
೩. ಮರದಿಂದ ಯಾವ ಸಾರ ಹೆಚ್ಚುತ್ತದೆ?
೪. ಸಾಬರಮತಿ ಆಶ್ರಮ ಯಾವ ರಾಜ್ಯದಲ್ಲಿತ್ತು?
೫. ಮೋಡಗಳನ್ನು ಯಾರು ತಡೆಯುತ್ತಾರೆ?
೬. ಆಟಗಳಲ್ಲಿರುವ ಎರಡು ಭೇದಗಳು ಯಾವುವು?
೭. ನವಿಲು ಯಾರನ್ನು ಕುರಿತು ತಪಸ್ಸು ಮಾಡಿತು?
೮. ನವಿಲು ಯಾವ ಬಣ್ಣದ ಪಕ್ಷಿ ?
೯. ಮೈಸೂರಿನ ಸಮೀಪದಲ್ಲಿರುವ ಸೊಬಗಿನ ತಾಣ ಯಾವುದು?

೧೦.ನಮ್ಮ ನಡೆ–ನುಡಿಯಲ್ಲಿ ಏನು ತುಂಬಿರಬೇಕು?

೧೧.ಮೈಸೂರು ಅರಮನೆ ಹಿಂಭಾಗದಲ್ಲಿ ಯಾವ ಅರಮನೆ ಇದೆ?

೧೨.ದಡ್ಡನ ಗುಣ ಯಾವುದು?

ಇ.) ಈ ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ: **(Any 3)**

**(2 X 3 =6)**

೧. ಮೈಸೂರಿನಲ್ಲಿರುವ ಪ್ರೇಕ್ಷಣೀಯ ಸ್ಥಳಗಳು ಯಾವುವು?

೨. ಗಾಂಧೀಜಿ ಇತರರಿಗೆ ಏನೆಂದು ಬುದ್ದಿ ಹೇಳುತ್ತಿದ್ದರು ?

೩. ಆಟಗಳು ಯಾರು ಯಾರನ್ನು ಸಂತೋಷ ಪಡಿಸುತ್ತವೆ?

೪. ನವಿಲು ಏನೆಂದು ಯೋಚಿಸಿ ದುಃಖ ಪಡುತ್ತಿತ್ತು?

೫. ಮೈಸೂರಿನ ಕೆಲವು ಜನಪ್ರಿಯ ಪದಾರ್ಥಗಳನ್ನು ಬರೆಯಿರಿ?

ಈ) ಈ ಕೆಳಗಿನ ಗದ್ಯಭಾಗವನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : **(1 X 5 =5)**

ಶ್ರೀ ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ ಎಂಬುದು ಕುವೆಂಪುರವರ ಪೂರ್ಣ ಹೆಸರು. ಅವರು ಈ ಹೆಸರಿನಿಂದಲೇ ಎಲ್ಲರಿಗೂ ಚಿರ–ಪರಿಚಿತರು. ಉತ್ತಮೋತ್ತಮ ಕೃತಿಗಳನ್ನು ಬರೆದು ಹೆಸರು ಮಾಡಿದ ಶ್ರೀಯುತರು ರಸಕವಿ, ವರಕವಿ, ಮಹಾಕವಿ, ರಾಷ್ಟ್ರಕವಿ ಎಂಬ ಹೆಸರುಗಳಿಂದ ಖ್ಯಾತಿ ಪಡೆದಿದ್ದರು.

ಶ್ರೀಯುತರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳ್ಳಿ ಎಂಬ ಗ್ರಾಮದಲ್ಲಿ ೨೯–೧೨–೧೯೦೪ ರಲ್ಲಿ ಜನಿಸಿದರು. ಅವರು ಪ್ರಾರಂಭಿಕ ಶಿಕ್ಷಣವನ್ನು ಅಲ್ಲಿಯೇ ಪಡೆದರು. ಉನ್ನತ ಶಿಕ್ಷಣ ಪಡೆಯಲು ಮೈಸೂರಿಗೆ ಬಂದರು. ೧೯೨೪ ರಲ್ಲಿ ಎಂ.ಎ ಪದವಿ ಪಡೆದರು. ಮುಂದೆ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಉಪನ್ಯಾಸಕರಾದರು.

ಕುವೆಂಪುರವರು ಪ್ರವೃತ್ತಿಯಲ್ಲಿ ಒಬ್ಬ ಉತ್ತಮ ಕವಿಯಾಗಿದ್ದರು. ಶ್ರೀಯುತರು ಅನೇಕ ಕೃತಿಗಳನ್ನು ಬರೆದಿದ್ದಾರೆ. ಅವರು ಬರೆದ 'ಶ್ರೀ ರಾಮಾಯಣ ದರ್ಶನಂ' ಎಂಬ ಮಹಾಕಾವ್ಯಕ್ಕೆ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ

೧) ಕುವೆಂಪು ಅವರ ಪೂರ್ಣ ಹೆಸರೇನು?

೨) ಕುವೆಂಪುರವರು ಎಲ್ಲಿ ಮತ್ತು ಯಾವಾಗ ಜನಿಸಿದರು?

೩) ಕುವೆಂಪುರವರು ಉನ್ನತ ಶಿಕ್ಷಣವನ್ನು ಎಲ್ಲಿ ಪಡೆದರು?

೪) ಕುವೆಂಪುರವರ ಮಹಾಕಾವ್ಯ ______________

೫) ಕುವೆಂಪುರವರು ಮೈಸೂರಿನ ________ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದರು.

********